ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಬಾಕಿ ಇರುವ ಹಣವೆಷ್ಟು?

ಆ) ಬಂದಿದ್ದರೆ ಆ ಕುರಿತು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಕೆ.ಹೆಚ್. ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಬಂದಿದೆ. ಬಾಕಿ ಇರುವ ಹಣ ರೂ. 94.206-60

ಆ) ಪ್ರಸ್ತುತ ವಿಷಯದ ಬಗ್ಗೆ ಮಂಡಲ ಪಂಚಾಯ್ತಿ ಕಾರ್ಯದರ್ಶಿ, ಪ್ರಧಾನವರಿಗೆ ನೋಟೀಸನ್ನು ನೀಡಲಾಗಿದ್ದು ಕಾನೂನಿನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಮಧ್ಯಂತರ ಮಂಡಲ ಪಂಚಾಯತ್ ನೌಕರರ ಪೆನ್‌ಶನ್ ಇತ್ಯರ್ಥ

3186-ಶ್ರೀ ಗೋಪಾಲ ಮುಕುಂದ ಕಾನಡೆ, (ಸಿರಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿರಾಜ್ ಸಚಿವರು ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1986ರಲ್ಲಿ ಕರ್ನಾಟಕದಲ್ಲಿ ಮಂಡಲಪಂಚಾಯ್ತಿಗಳಾಗಿ ಪರಿವರ್ತಿಸಲ್ಪಟ್ಟ ಪುರಸಭೆಗಳ ಸಂಖ್ಯೆ ಎಷ್ಟು ಹಾಗೂ ಈ ಮಧ್ಯಂತರ ಮಂಡಲಗಳಲ್ಲಿ ಸೇವೆ ಸಲ್ಲಿಸುವ ನೌಕರರ ಸಂಖ್ಯೆ ಎಷ್ಟು?

ಆ) ಈ ಮಧ್ಯಂತರ ಮಂಡಲದಲ್ಲಿ ಸೇವೆ ಸಲ್ಲಿಸುವ ನೌಕರರು ಸರ್ಕಾರಿ ನೌಕರರೋ ಅಥವಾ ಖಾಸಗಿ ನೌಕರರೋ?

ಇ) ಈ ಮಧ್ಯಂತರ ಮಂಡಲದಲ್ಲಿ ಸೇವೆ ಸಲ್ಲಿಸುವ ನೌಕರರು ನಿವೃತ್ತರಾದಾಗ ಅವರ ಪಿಂಚಣಿ ಪ್ರಕರಣ ಇತ್ಯರ್ಥಕ್ಕೆ ಅವರು ಮಂಡಲಪಂಚಾಯತ್‌ನಲ್ಲಿ ಸಲ್ಲಿಸಿದ ಸೇವಾವಧಿಯನ್ನು ಪೆನ್‌ಷನ್ ಲೆಕ್ಕಾಚಾರಕ್ಕೆ ಪರಿಗಣಿಸಲಾಗುತ್ತಿದೆಯೇ ಇಲ್ಲದಿದ್ದರೆ ಅದಕ್ಕೆ ಕಾರಣಗಳೇನು?

ಈ) ಈ ಕುರಿತು ಸರ್ಕಾರದಿಂದ ಅವಶ್ಯವಿರುವ ಅಧಿಸೂಚನೆಯನ್ನು ಹೊರಡಿಸಲು ಕೋರಿ ಉತ್ತರ ಕನ್ನಡ ಜಿಲ್ಲಾ, ಸಿದ್ದಾಪುರ ಪೌರ ಸೇವಾನೌಕರರ ಸಂಘವು ದಿನಾಂಕ 20-6-90 ರಿಂದ ಈವರೆಗೆ ಎಷ್ಟು ಮನವಿ ಸಲ್ಲಿಸಿವೆ ಹಾಗೂ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತುಪಂಚಾಯತ್ ರಾಜ್ ಸಚಿವರು):

ಅ) 71

ಆ) 1328

ಇ) ಪೌರ ನೌಕರರು,

ಈ) ಈ ಬಗ್ಗೆ ಸಿದ್ದಾಪುರ ಪೌರಸೇವಾ ನೌಕರರ ಸಂಘ ಸೇರಿದಂತೆ ಇನ್ನೂ ಹಲವು ಸಂಘಸಂಸ್ಥೆಗಳಿಂದ ಮನವಿಗಳು ಬಂದಿದ್ದು ವಿಷಯವು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ಏತ ನೀರಾವರಿ ಸಚಿವರು

2966 - ಶ್ರೀಕೆ.ಬಿ. ಕೋಳಿವಾಡ್ (ರಾಣೆಬೆನ್ನೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ಹಾಗೂ ಕೃಷ್ಣಾ ಬೇಸಿನ್ನುಗಳ ಏತ ನೀರಾವರಿ ಕಾರ್ಪೊರೇಶನ್ ಗಳನ್ನು ಸ್ಥಾಪನೆ ಮಾಡಿದಂದಿನಿಂದ ಇಲ್ಲಿಯವರೆಗೆ ಎಷ್ಟು ಯೋಜನೆಗಳನ್ನು ಕೈಗೆತ್ತಿ ಕೊಳ್ಳಲಾಗಿದೆ?

ಆ) ಇಲ್ಲಿಯವರೆಗೆ ಕಾವೇರಿ ಬೇಸಿನ್ ಹಾಗೂ ಕೃಷ್ಣಾ ಬೇಸಿನ್ ನಿಗಮಗಳಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ.

ಇ) ಎರಡು ಕಾರ್ಪೊರೇಶನ್ನುಗಳಲ್ಲಿ ಎಷ್ಟು ಮಂದಿ ಸಹಾಯಕ ಅಭಿಯಂತರರನ್ನು ಹಂಗಾಮಿಯಾಗಿ ನೇಮಿಸಿಕೊಳ್ಳಲಾಗಿದೆ ಹಾಗೂ ಅವರನ್ನು ಖಾಯಂ ಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು.

ಅ) ಕಾವೇರಿ ಜಲಾನಯನ ಏತ ನೀರಾವರಿ ನಿಗಮದಿಂದ 17ಮತ್ತು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ 4 ಏತ ನೀರಾವರಿ ಯೋಜನೆಗಳ ಕೆಲಸಗಳನ್ನು ಕೈಗೆತ್ತಿ ಕೊಳ್ಳಲಾಗಿದೆ.

ಆ) ಜುಲೈ 1991ರ ಅಂತ್ಯದವರೆಗೆ ಕಾವೇರಿ ಜಲಾನಯನ ಏತ ನೀರಾವರಿ ನಿಗಮದಿಂದ ಒಟ್ಟು 325.22 ಲಕ್ಷ ರೂಪಾಯಿಗಳನ್ನು ಮತ್ತು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ ಒಟ್ಟು 229.73ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗಿದೆ.

ಇ) ಕಾವೇರಿ ಜಲಾನಯನ ಏತ ನೀರಾವರಿ ನಿಗಮದಲ್ಲಿ 55 ಸಹಾಯಕ ಅಭಭಿಯಂತರರನ್ನು ಮತ್ತು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಲ್ಲಿ 47 ಸಹಾಯಕ ಅಭಿಯಂತರರನ್ನು ಗುತ್ತಿಗೆ ಆಧಾರದ ಮೇಲೆ ಹಂಗಾಮಿಯಾಗಿ ನೇಮಿಸಿಕೊಳ್ಳಲಾಗಿದೆ, ಅವರನ್ನು ಖಾಯಂ ಗೊಳಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಪತ್ರಿಕೆಗಳಲ್ಲಿ ಸರ್ಕಾರೀ ಜಾಹೀರಾತು.

3061 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಗುರುತಿಸಲ್ಪಟ್ಟಿರುವ ಪತ್ರಿಕೆಗಳೆಷ್ಟು?

ಆ) ಸರ್ಕಾರವು ಎಷ್ಟು ಪತ್ರಿಕೆಗಳಿಗೆ 1990-91 ಮತ್ತು 1991-92ರ ಜುಲೈ 31ರವರೆವಿಗೆ ಜಾಹೀರಾತು ನೀಡಿದೆ.ಹಾಗೂ ಇದಕ್ಕಾಗಿ ಮಂಜೂರು ಮಾಡಿದ ಹಣಎಷ್ಟು (ಜಾಹೀರಾತು ಪಡೆದ ಪತ್ರಿಕೆಗಳ ಹೆಸರು ವಿವರಗಳನ್ನು ಕೊಡುವುದು)

ಇ) ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವ ಸಣ್ಣಪತ್ರಿಕೆಗಳಿಗೆ ಹೆಚ್ಚಿನ ಜಾಹೀರಾತನ್ನು ಕೊಡುವ ವಿಚಾರವನ್ನು ಸರ್ಕಾರ ಪರಿಶೀಲಿಸುತ್ತದೆಯೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):

ಅ) 159 ದಿನಪತ್ರಿಕೆಗಳು ಮತ್ತು 136 ನಿಯತಕಾಲಿಕೆಗಳನ್ನು ಗುರುತಿಸಲಾಗಿದೆ.

ಆ) ಪತ್ರಿಕೆಗಳಿಗೆ ಈ ಕೆಳಕಂಡಂತೆ ಜಾಹೀರಾತು ಬಿಡುಗಡೆ ಮಾಡಲಾಗಿದೆ.